| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಸಿಸಿ ನಂ. 82/2022 | | | |
| ಸಾಕ್ಷಿದಾರರ ಹೆಸರು | ನಂದಿನಿ | | |
| ಗಂಡನ ಹೆಸರು | ವೆಂಕಟೇಶ್ ಬಾಬು | ಪಿಡಬ್ಲ್ಯೂಃ | 4 |
| ವಯಸ್ಸು | 31 ವರ್ಷ | ಸಿಡಬ್ಲ್ಯೂಃ | 4 |
| ಉದ್ಯೋಗ | ಶಿಕ್ಷಕಿ | ಪ್ರಮಾಣ ವಚನ | |
| ವಾಸ ಸ್ಥಳ | ಚಿಂತಾಮಣಿ | ಭೋದಿಸಿದ ದಿನಾಂಕ | 05-10-2023 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ಚಾಸ-1 ರವರು ಗೊತ್ತು. ದಿಃ07-05-2020 ರಂದು ಸಂಜೆ 6-30 ಗಂಟೆಗೆ ರಾಕೇಶ್ ಎಂಬುವವರು ಚಾಸ-1 ರವರ ಮೇಲೆ ಗಲಾಟೆ ಮಾಡುತ್ತಿದ್ದಾರೆ ಅಂತ ಚಾಸ-1 ರವರು ಪೋನ್ ಮಾಡಿದ್ದು ಆ ಗಲಾಟೆ ಶಬ್ದ ಕೇಳಿ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ಚಾಸ-2 ಮತ್ತು 3 ರವರು ಕುಳಿತಿದ್ದು ರಾಕೇಶ್ ರವರು ಮನೆಯ ಪತ್ರಕ್ಕೆ ಸಂಬಂಧಿಸಿದಂತೆ ಚಾಸಾ-1 ಜೊತೆ ಬೈಯ್ಯುವುದು ಎಳೆದಾಡುವುದು, ಬೇವರ್ಸಿ ಮುಂಡೆ ಆಂದ್ರದಿಂದ ರೌಡಿಗಳನ್ನು ಕರೆಸಿ ಸಾಯಿಸುತ್ತೇನೆ ಅಂತ ಬೆದರಿಕೆ ಹಾಕಿದ್ದು ಮತ್ತೆ ನಿಮ್ಮ ಮೇಲೆ ಚೆಕ್ ಕೇಸುಗಳನ್ನು ದಾಖಲು ಮಾಡುತ್ತೇನೆ ಅಂತ ಹೇಳಿರುತ್ತಾರೆ. ರಾಕೇಶ್ ರವರು ಚಾಸ-1 ರವರ ಮನೆಗೆ ಬಂದು ಹೋಗುತ್ತಿದ್ದು ಮೊದಲಿಂದಲೂ ಪರಿಚಯ ಇದ್ದು ಅವರೊಂದಿಗೆ ಅಸ್ಬ್ಯವಾಗಿ ನಡೆದುಕೊಂಡಿರುತ್ತಾರೆ. ಮನೆಯ ಲೋನ್ ವಿಚಾರಕ್ಕೆ ಸಂಬಂಧಿಸಿದಂತೆ ಚೆಕ್ ಗಳನ್ನು ಪಡೆದುಕೊಂಡು ಅದರ ಮೇಲೆ ಕೇಸು ಹಾಕುತ್ತೇನೆ ಅಂತ ಹೇಳಿ ಧಮಕಿ ಹಾಕುತ್ತಿದ್ದರು. ಈ ವಿಚಾರಕ್ಕೆ ಸಂಬಂದಿಸಿದಂತೆ ಚಾ-1 ರವರು ಒಂದು ವರ್ಷದ ನಂತರ ಪ್ರಕರಣ ದಾಖಲು ಮಾಡಿರುವುದು ಗೊತ್ತಾಗಿರುತ್ತದೆ.

ದಿಃ29-07-2021 ರಂದು ನಿಪಿ-2 ದಾಖಲೆಗೆ ಸಹಿ ಮಾಡಿರುತ್ತೇನೆ. ಪೋಲಿಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಸಹಿ ಮಾಡುವ ಕಾಲಕ್ಕೆ ಚಾಸ-1,6 ಮತುತ ನಾನು ಇದ್ದೆವು. ಆಗ ಮಧ್ಯಾಹ್ನ 1 ರಿಂದ 1-30 ಗಂಟೆಯಾಗಿರುತ್ತದೆ. ರಾೀ ವಿಚಾರಕ್ಕೆ ಸಂಬಂದಿಸಿದಂತೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಗೈರು ಹಾಜರಿರುವ ಅರೋಪಿಯನ್ನು ನೋಡಿ ಗುರುತಿಸುವಲ್ಲಿ ಅರೋಪಿ ಪರ ವಕೀಲರು ತಕರಾರು ಇರುವುದಿಲ್ಲ.

ನಿಪಿ-2 ರಲ್ಲಿ ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ನಿಪಿ 2 (ಬಿ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು 200 ರೂ ವೆಚ್ಚದೊಂದಿಗೆ ಪಾಟೀಸವಾಲಿಗೆ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

Accused absent, EP filed perused allowed exempted for the day. Cw4 present, examined as pw4 got marked ExP2(b), defence counsel prays time for cross of pw4 time granted on cost of Rs.200/-

cw5 present, depose same set of facts of the Cw4. Hence evidence of Cw5 given up.

Learned APP filed application U/sec. 216 of CrPC.

For objection and cross of pw4.

Call on 02-11-2023.

**Prl. C.J. & JMFC.,**
**Chintamani**